ಡೈರಕ್ಟ ಬಸ್ ವ್ಯವಸ್ಥೆ ಮಾಡುವ ಬಗ್ಗೆ ಕೋರಿಕೊಳ್ಳುತೇನೆ. ಇನ್ನು ಕಿತ್ತೂರು ರಾಣಿ ಚೆನ್ನಮ್ಮನ ವರ ತಾಣದ ಅಭಿವೃದ್ದಿ ಬಗ್ಗೆ ಹೇಳಬೇಕೆಂದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಕಿತ್ತೂರು ಅಭಿವೃದ್ದಿ ಪ್ರಾಧಿಕಾರ ಮಾಡಿ ಆ ಮೂಲಕ ಅಭಿವೃದ್ದಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ. ಆದುದರಿಂದ ಆ ತಾಣವನ್ನು ಅಭಿವೃದ್ದಿಪಡಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯಕ್ರಮ ತೆಗೆದುಕೊಂಡಿರುವುದರಿಂದ ನಾವು ಅಲ್ಲಿ ಸುಮಾರು 4 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಮತ್ತು ಬೈಲಹೊಂಗಲದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ವರ ಸಮಾಧಿಗೆ 4.98 ಲಕ್ಷ ರೂಪಾಯಿ ವೆಚ್ಚದಲ್ಲಿ ಹೊನಲು ಬೆಳಕಿನ ವ್ಯವಸ್ಥೆಯನ್ನು ನಮ್ಮ ಇಲಾಖೆಯ ವಾಪ್ತಿಯಿಂದ ಮಾಡಿದ್ದೇವೆ. ಮಿಕ್ಕಿದೆಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಮಾಡುತ್ತಾರೆ. ಮತ್ತು ಗೋಕಾಕ್ ಫಾಲ್ಸ್,ಗೊಡಚಿನಮಲಕಿ ಅಭಿವೃದ್ದಿ.ಇವೆರಡೂ ಒಳ್ಳೆಯ ಜಲಾಶಯಗಳು. ಈ ಜಲಾಶಯಗಳಲ್ಲಿ ಗೋಕಾಕ್ ಫಾಲ್ಸನ್ನು 1993-94ನೇ ಇಸನಿಯಲ್ಲಿ ಕೇಂದ್ರ ಸರ್ಕಾರಕ್ಕೆ ಒಂದು ಸ್ಕೀಮ್ ಮಾಡಿ ನಾವು ಕಳುಹಿಸಿಕೊಟ್ಟಿದ್ದೇವೆ.ಆ ಸ್ಕೀಮ್ ಬಂದ ತಕ್ಷಣ ಗೋಕಾಕ್ ಫಾಲ್ಸನ್ನು ಆದಷ್ಟು ಬೇಗನೆ ತೆಗೆದುಕೊಳುತ್ತೇವೆ.

ಅರಸೀಕೆರೆಯಿಂದ ಬೆಂಗಳೂರಿಗೆ ಸಾರಿಗೆ ವ್ಯವಸ್ಥೆ.

296(108) ಶ್ರೀ ಬಿ.ಎಸ್. ಯಡಿಯೂರಪ್ಪ, (ಶಿಕಾರಿಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಬೆಂಗಳೂರು-ಅರಸೀಕೆರೆ ರೈಲು ಮಾರ್ಗವನ್ನು ವಿಸ್ತಾರಗೊಳಿಸುತ್ತಿರುವುದರಿಂದ ಅರಸೀಕೆರೆಯಿಂದ ಬೆಂಗಳೂರಿಗೆ ಬರುವ ಪ್ರಯಾಣಿಕರ ಒತ್ತಡ ಸರಳಗೊಳಿಸಲು ಸರ್ಕಾರ ಸಾರಿಗೆ ವ್ಯವಸ್ಥೆಯ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :-

ಅ) ಸಂಸ್ಥೆಯ ವತಿಯಿಂದ ಈಗಾಗಲೇ ಮೂರು ಹೆಚ್ಚುವರಿ ಮಾರ್ಗಗಳನ್ನು ಬೆಂಗಳೂರು ಮತ್ತು ಅರಸೀಕೆರೆ ನಡುವೆ ದಿನಾಂಕ : 28-2-93 ರಿಂದ ಪ್ರಾರಂಬಿಸಲಾಗಿದೆ. ಹಾಗೂ ಬೆಂಗಳೂರಿನಿಂದ ತಿಪಟೂರಿಗೆ ಒಂದು ಹೊಸ ಮಾರ್ಗವನ್ನು ಪ್ರಾರಂಬಿಸಲಾಗಿದೆ. ಒಂದು ಸಾಮಾನ್ಯ ಸಾರಿಗೆ ಸೇವೆಯನ್ನು ಬೆಂಗಳೂರಿನಿಂದ ಕಿಬ್ಬನಹಳ್ಳಿ ಕ್ರಾಸ್ ನಡುವೆ ಕಲ್ಪಿಸಲಾಗಿದೆ.ಒಂದು ಸಾಮಾನ್ಯ ಸಾರಿಗೆ ಸೇವೆಯನ್ನು ಬೆಂಗಳೂರು -ಗುಬ್ಬಿ ನಡುವೆ ಪ್ರತ್ಯೇಕವಾಗಿ ಪ್ರಾರಂಬಿಸಲಾಗಿದೆ.ಇದಲ್ಲದೆ ಹೊಸದಾಗಿ 22 ತಡೆರಹಿತ, 38 ವೇಗದೂತ ವಾಹನಗಳನ್ನು ಬೆಂಗಳೂರು ಮತ್ತು ತುಮಕೂರು ನಡುವೆ ಪ್ರಾರಂಬಿಸಲಾಗಿದೆ. ಪ್ರಯಾಣಿಕರ ಒತ್ತಡಕ್ಕನುಗುಣವಾಗಿ 5 ಹೆಚ್ಚುವರಿ ಸಾರಿಗೆಗಳನ್ನು ಬೆಂಗಳೂರು ಮತ್ತು ಶಿವಮೊಗ್ಗ ನಡುವೆ ಹಾಗೂ ಒಂದು ಹೆಚ್ಚುವರಿ ಸಾರಿಗೆಗಳನ್ನು ಬೆಂಗಳೂರು ಮತ್ತು ಭದ್ರಾವತಿ ನಡುವೆ ಪ್ರಾರಂಬಿಸಲಾಗಿದೆ. ಬೆಂಗಳೂರು-ಅರಸಿಕರೆ ನಡುವೆ ಹೊಸ ಮಾರ್ಗಗಳನ್ನು ವಿಸ್ತಾರಗೊಳಿಸುತ್ತಿರುವುದರಿಂದ ಈ ಮೇಲಿನ ಸಾರಿಗೆಗಳು ಪ್ರಯಾಣಿಕರ ಒತ್ತಡವನ್ನು ಪೂರೈಸುತ್ತಿದ್ದು ಇನ್ನು ಹೆಚ್ಚಿನ ಸಾರಿಗೆಗಳ ಅಗತ್ಯ ಕಂಡುಬಂದಲ್ಲಿ ಸಂಸ್ಥೆ ವತಿಯಿಂದ ಹೆಚ್ಚಿನ ಸಾರಿಗೆಗಳನ್ನು ಪ್ರಾರಂಭಿಸಲಾಗುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ :- ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆಗೆ ಉತ್ತರದಲ್ಲಿ ಸ್ವಲ್ಪ ವ್ಯತ್ಯಾಸ ಇದೆ. ಇಲ್ಲ ಪ್ರಶ್ನೆ ಇರುವುದು ಏನೆಂದರೆ ಶಿವಮೊಗ್ಗ - ಬೆಂಗಳೂರಿಗೆ ಇದ್ದಂಥ

ಮಲೆನಾಡು ಎಕ್ಸಪ್ರೆಸ್ ನಿಂತುಹೋಗಿದೆ. ಇದರಿಂದ ಶಿವಮೊಗ್ಗ, ತುಮಕೂರು, ಹಾಸನ, ಚಿಕ್ಕಮಗಳೂರು ಈ ನಾಲ್ಕು ಜಿಲ್ಲೆಯ ಪ್ರಯಾಣಿಕರಿಗೆ ತುಂಬ ತೊಂದರೆಯಾಗುತ್ತಿದೆ. ಟ್ರೈನ್‌ನಲ್ಲಿ ಬಂದವರು ಅರಸೀಕೆರೆಯಿಂದ ಆ ಕಡೆ ಈ ಕಡೆ ಹೋಗಬೇಕು ಇದರಿಂದ ಬಹಳ ತೊಂದರೆಯಾಗಿದೆ. ಇಂತಹ ಒಂದು ಸಂಧರ್ಭದಲ್ಲಿ ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಮಲೆನಾಡು ಎಕ್ಸಪ್ರೆಸ್ ಬ್ರಾಡ್‌ಗೇಜ್ ಮಾಡುವಂಥ ಸಂಧರ್ಭದಲ್ಲಿ ಅರಿಸಿಕೆರೆಗೆ ಮಾತ್ರ ಸ್ಯಾಂಕ್ಷನ್ ಆಗಿದೆ. ಅದು ಮುಗಿಯುವುದಕ್ಕೆ ಒಂದು ವರ್ಷವಾಗಬಹುದು. ಇದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತಿದೆ. ಈ ಬ್ರಾಡ್‌ಗೇಜ್ ಶಿವಮೊಗ್ಗದವರಿಗೆ ಆಗುವ ದೃಷ್ಟಿಯಿಂದ ನಿಮ್ಮ ಪ್ರಭಾವವನ್ನು ಬೀರಬೇಕಾಗುವ ಹಾಗೆ ನೋಡಿಕೊಳ್ಳಿ. ಇದರಿಂದ ಶಿವಮೊಗ್ಗ, ತುಮಕೂರು, ಹಾಸನ, ಚಿಕ್ಕಮಗಳೂರು ಈ ನಾಲ್ಕು ಜಿಲ್ಲೆಗಳಿಗೆ ಎಫೆಕ್ಟ್ ಆಗುತ್ತಿದೆ. ಸಾರಿಗೆ ಸಚಿವರನ್ನು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ಶಿವಮೊಗ್ಗ - ಬೆಂಗಳೂರು ಬೆಂಗಳೂರು - ಶಿವಮೊಗ್ಗಕ್ಕೆ ಟ್ರೈನ್ ನಿಂತುರುವಂತಹ ಸಂಧರ್ಭದಲ್ಲಿ ಸೂಪರ್‌ಡಿಲಕ್ಸ ಬಸ್ ಅನ್ನು ಆ ಕಡೆಯಿಂದ 3 ಬಸ್, ಈಕಡೆಯಿಂದ 3 ಬಸ್ ಹಾಕಿಕೊಡುವಂಥದ್ದು ಮತ್ತು ಬೆಂಗಳೂರು ಮೈಸೂರಿಗೆ ಯಾವ ರೀತಿ ನಾನ್ ಸ್ಟಾಪ್ ಬಸ್ ಓಡಿಸುತ್ತಿದ್ದಾರೆ ಅದೇ ರೀತಿ ಶಿವಮೊಗ್ಗ - ಬೆಂಗಳೂರಿಗೆ ಕನಿಷ್ಟ 4-5 ನಾನ್ ಸ್ಟಾಪ್ ಬಸ್‌ಗಳನ್ನು ತಕ್ಷಣ ತಾವು ಹಾಕಿ ಕೊಡಬೇಕು. ಅದೇ ರೀತಿ ಇತರೆ ಕಡೆಗೂ ಒಂದುಸೂಕ್ತ ವ್ಯವಸ್ತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ :- ಮಾನ್ಯ ಅಧ್ಯಕ್ಷರೆ , ಅರಸೀಕೆರೆ ಬೆಂಗಳೂರು ಬಗ್ಗೆ ಪ್ರಶ್ನೆ ಇತ್ತು ಅವರು ಶಿವಮೊಗ್ಗ - ಬೆಂಗಳೂರಿನ ಬಗ್ಗೆ ಹೇಳುತ್ತಿದ್ದಾರೆ. ಶಿವಮೊಗ್ಗ - ಬೆಂಗಳೂರು ಅನ್ನು ನಾವು ಕವರ್ ಮಾಡಿದ್ದೇವೆ. ರೈಲ್ವೆ ಅಥಾರಿಟಿಯವರು ರೈಲನ್ನು ಸಸ್‌ಪೆಂಡ್ ಮಾಡಿದ ನಂತರ 28.1.93 ರಿಂದ ಬಂದಾಗಿದೆ. ಆವಾಗಿನಿಂದ ಇಲ್ಲಿಯವರೆಗೆ ನಮ್ಮ ಕೆ.ಎಸ್.ಆರ್.ಟಿ.ಸಿಯಿಂದ 12 ಬಸ್‌ಗಳನ್ನು ಹೆಚ್ಚು ಕೊಟ್ಟಿದ್ದೇವೆ. 13 ಬಸ್ ಇತ್ತು , 3ಕ್ಕೆ ಅವಶ್ಯಕತೆ ಇಲ್ಲ 2-3 ದಿವಸ ಏನೂ ಕೆಲಸ ಇಲ್ಲವೆಂದು ವಾಪಸ್ಸು ತೆಗೆದುಕೊಂಡಿದ್ದೇವೆ. ಬಸ್‌ಗಳು ಎಷ್ಟು ಅವಷ್ಯಕತೆ ಇತ್ತು, ಅಷ್ಟು ಬಸ್ ಕೊಟ್ಟಿದ್ದೇವೆ. ಮೊದಲು ಇಷ್ಟು ಇತ್ತು ಈಗ ಎಷ್ಟಿದೆಯೆಂದು ತಾವು ಕೇಳುತ್ತಿದ್ದೀರಿ. ಮೊದಲು ಅರಸೀಕೆರೆ-ಬೆಂಗಳೂರು-83, ಶಿವಮೊಗ್ಗ-40, ಬೇರೆ ಬಿಯಾಂಡ್ ಶಿವಮೊಗ್ಗ ಹೋಗುವುದು-31, ಅಂದರೆ 154 ಬಸ್ ಮೊದಲು ಇದ್ದವು. ಈಗ ನಾವು 12 ಹೆಚ್ಚು ಮಾಡಿದ್ದೇವೆ. ನಮ್ಮ ಇನ್‌ಫರ್‌ಮೇಷನ್ ಪ್ರಕಾರ ಈಗ ಸಧ್ಯಕ್ಕೆ ಹೆಚ್ಚು ಬಸ್ ಅವಶ್ಯಕತೆ ಇಲ್ಲ. ತಾವು ಹೆಚ್ಚು ಬೇಕು ಎಂದು ಹೇಳುತ್ತೀರಿ, ಅದರಲ್ಲಿ ನಾನ್‌ಸ್ಟಾಪ್ ಬಸ್ ಬೇಕೆಂದು ತಾವು ಕೇಳುತ್ತೀರಿ. ಆ ನಾನ್‌ಸ್ಟಾಪ್ ಬಸ್ ಬೆಂಗಳೂರು - ಶಿವಮೊಗ್ಗ ಎಕ್ಸಪ್ರೆಸ್, 5 ಹೆಚ್ಚು ಮಡಿದ್ದೇವೆ. ಬೆಂಗಳೂರು-ಭದ್ರಾವತಿ ಎಕ್ಸಪ್ರೆಸ್ ಒಂದು ಹಚ್ಚು ಮಾಡಿದ್ದೇವೆ. ಅದಲ್ಲದೆ ನಾನ್ ಸ್ಟಾಪ್ ಮಾರ್ನಿಂಗ್, ಈವನಿಂಗ್ ಇವರೆಡು ನೀಡಿದ್ದೇವೆ. ಮತ್ತೊಂದು ಕೇಳಿದ್ದೀರಿ ಅದನ್ನು ವಿಚಾರ ಮಾಡುತ್ತೇವೆ. ಈಗ ಸೂಪರ್ ಡಿಲಕ್ಸ್ ಬೆಳಿಗ್ಗೆ ಒಂದು ಸಂಜೆ ಒಂದು ಎರಡು ಇದೆ ಈಗ ಮತ್ತೆ ಕೇಳುತ್ತಿದ್ದೀರಿ ಸೂಪರ್ ಡಿಲಕ್ಸ್ ಬಾಡಿ ಬಿಲ್ಡಿಂಗ್ ಆಗುತ್ತಿದೆ ಅದು ಆದನಂತರ ವಿಚಾರ ಮಾಡುತ್ತೇವೆ. ಈಗ ಸಧ್ಯ ಮಾತ್ರ I think it is enough for the travelling of the passengers.

ಶ್ರೀ ಬಿ.ಎಸ್.ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ

ನನಗೆ ಆಶ್ಚರ್ಯವಾಗುತ್ತಿದೆ. ತಾವೆ ಒಪ್ಪಿಕೊಳ್ಳುತ್ತೀರಿ, ಮಲೆನಾಡು ಎಕ್ಸ್‌ಪ್ರೆಸ್ ಆ ಕಡೆಯಿಂದ ಈ ಕಡೆ ಹೋಗುವ ಟೈಮ್ ನಿಂತು ಹೋಗಿದೆಯೆಂದು ಅಲ್ಲಿ ಪ್ರಯಾಣ ಮಾಡುತ್ತಿದ್ದ ಸಾವಿರಾರು ಪ್ರಯಾಣಿಕರು ಹೇಗೆ ಪ್ರಯಾಣ ಮಾಡಬೇಕು. ಪ್ರಯಾಣ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ತಾವು ಇದಾದ ಮೇಲೆ ಶಿವಮೊಗ್ಗ - ಬೆಂಗಳೂರಿಗೆ 5 ಬಸ್ ಚಾಸ್ತಿ ಮಾಡಿದ್ದೀರಿ. ಅರಸೀಕೆರೆಗೆ ನಾನು ಕೇಳುತ್ತಿಲ್ಲ ಅಥವ ಮಧ್ಯದಲ್ಲಿ ತುಮಕೂರಿಗೆ ನಾನು ಕೇಳುತ್ತಿಲ್ಲ. ನಾನು ನಿಮಗೆ ನೇರವಾಗಿ ಕೇಳುತ್ತಿರುವುದು ಏನೆಂದರೆ ಶಿವಮೊಗ್ಗದಿಂದ-ಬೆಂಗಳೂರಿಗೆ ಪ್ರಯಾಣ ಮಾಡುವವರಿಗೆ ತೊಂದರೆಯಾಗಿದೆ. ಇದಕ್ಕಾಗಿ ಎರಡು ಕಡೆಯಿಂದ ಬೆಂಗಳೂರು-ಮೈಸೂರು ನಾನ್ ಸ್ಟಾಪ್ ಬಸ್ ಓಡಿಸುತಿದ್ದೀರಿ ಅದೇ ರೀತಿ ಬೆಳಗ್ಗೆ ಸಾಯಂಕಾಲ ಕನಿಷ್ಟ 5 ನಾನ್ ಸ್ಟಾಪ್ ಬಸ್‌ಗಳನ್ನು ಬೆಂಗಳೂರಿಗೆ ಓಡಿಸಬೇಕು. ಅದೂ ಅಲ್ಲದೆ ಸೂಪರ್ ಡಿಲಕ್ಸ್ ಬಸ್ ಆ ಕಡೆಯಿಂದ 2 ಈ ಕಡೆಯಿಂದ 2 ಓಡಿಸಬೇಕು. ಅದು ಅಗತ್ಯ ಎನಿಸಿದರೆ ಅಮೇಲೆ ಚಾಸ್ತಿ ಮಾಡುವಿರಂತೆ. ಇಷ್ಟಾದರೂ ಮಾಡಬೇಕಲ್ಲ ಅದನ್ನು ನೇರವಾಗಿ ನಾನು ನಿಮ್ಮನ್ನು ಕೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ :- ಮಾನ್ಯ ಅಧ್ಯಕ್ಷರೆ ಸಧ್ಯ 2 ಸೂಪರ್ ಡೀಲಕ್ಸ್ ಬಸ್‌ಗಳು ಓಡಾಡುತ್ತಿವೆ ಮತ್ತು ಬೇರೆ ಸೂಪರ್ ಡೀಲಕ್ಸ್ ಬಸ್ ವಿಷಯ ನಮ್ಮಲ್ಲಿ ಇಲ್ಲ. ಅದು ಬಂದ ನಂತರ ಮಾಡುತ್ತೇವೆ. ಈಗ ಸಧ್ಯ 5 ಬಸ್ ಹೆಚ್ಚು ಬಿಡಿಯೆಂದು ಕೇಳುತ್ತಿದ್ದೀರಿ. ನಾವು 5 ಬಸ್ ಕೊಡಬಹುದು provided the passengers are there.

ಶ್ರೀ ಅಂಜನ ಮೂರ್ತಿ :- ಮಾನ್ಯ ಅಧ್ಯಕ್ಷರೆ ಈ ಅರಸೀಕೆರೆ-ಬೆಂಗಳೂರು ರೈಲು ನಮ್ಮ ನೆಲಮಂಗಲದ ಮುಖಾಂತರ ಓಡಾಡುತ್ತಿದೆ. ತಮಗೆ ಗೊತ್ತಿರುವ ಹಾಗೆ ಕಳೆದ 1ನೇ ತಾರೀಖು ಪ್ರಶ್ನೆ ಕಾಲ ಬರೆ 20 ನಿಮಿಷಗಳಲ್ಲಿ ಮುಗಿಯಿತು. ಆ ದಿನ ಸಚಿವರಾದಂಥ ನಾಗಮ್ಮ.ಸಿ.ಕೇಶವಮೂರ್ತಿಯವರು, ಯಡಿಯೂರಪ್ಪನವರು, ವೀರಭದ್ರಪ್ಪನವರು ಮತ್ತು ಇನ್ನು ಅನೇಕ ಸಧಸ್ಯರು ಭಾಗವಹಿಸಲಿಕ್ಕೆ ಆಗಲಿಲ್ಲ ಕಾರಣ ಅರಿಸೀಕೆರೆ ಟೈಮ್ ನಿಲ್ಲಿಸಿರುವುದರಿಂದ ನಮ್ಮ ಗ್ರಾಮಾಂತರ ಪ್ರದೇಶಗಳಿಗೆ ಹಾಕಿರುವ ಬಸ್‌ನಲ್ಲಿ ಜನಸಂಧಣಿ ಹೆಚ್ಚಾಗಿ ಬಸ್ ಇಲ್ಲದೆ ರೋಡ್‌ನಲ್ಲಿ ಎಲ್ಲರನ್ನೂ ಅಟಾಕ್ ಮಾಡಿ ರೋಡ್ ಕ್ಲೋಸ್ ಮಾಡಿದ್ದರು. ಆ ಕಾರಣದಿಂದಾಗಿ ನಾಗಮ್ಮ ಕೇಶವಮೂರ್ತಿಯವರು ನಾವು ಮತ್ತು ಸಂಭಂಧಪಟ್ಟ ಇಲಾಖೆಯವರಿಗೆ ಮನವಿ ಸಲ್ಲಿಸಿದಾಗ ಬಸ್ ಇಲ್ಲ ಬಸ್ ಹಾಕಬೇಕು ನಾವು ಏನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ನಮ್ಮ ನೆಲಮಂಗಲದಲ್ಲಿ ವಿಧ್ಯಾರ್ಥಿಗಳು ಮತ್ತು ಸಾರ್ವಜನಿಕರು ಬಸ್ ಗಳ ಸೌಕರ್ಯವಿಲ್ಲದೆ ಪ್ರತಿಭಟನೆ ಮಾಡಿದ್ದಾರೆ. ತಾವು ದಯಮಾಡಿ ಸೂಕ್ತ ಕ್ರಮ ಕೈಗೊಂಡು ನೆಲಮಂಗಲದಲ್ಲಿ ಹಾಗು ಇತರ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಬಸ್ ಸೌಕರ್ಯವನ್ನು ಒದಗಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ನಾನು ಕಾಲಿಂಗ್ ಅಟೆನಶನ್ ನೋಟಿಸ್ ಕಳುಹಿಸಿದ್ದೇನೆ. ಇದುವರೆಗೆ ಅದು ಬರಲಿಲ್ಲ. ಶ್ರಿಮತಿ ನಾಗಮ್ಮ ಕೇಶವಮೂರ್ತಿಯವರು ಶ್ರಿ ಯಡಿಯೂರಪ್ಪನವರು ಎಲ್ಲರೂ ಅಲ್ಲಿ ತಗಲಾಕಿಕೊಂಡಿದ್ದರಿಂದ ಇಲ್ಲಿಗೆ ಬರಬೇಕಾದರೆ ಸುಮಾರು ಒಂದು ಗಂಟೆಯಾಯಿತು.

ಶ್ರೀ ಭೀಮಣ್ಣ ಖಂಡ್ರೆ :- ಸಧ್ಯಕ್ಕೆ ರೇಲ್ವೆನವರ ಕೆಲಸಕಾರ್ಯಗಳು ನಡೆಯುತ್ತಿರುವುದರಿಂದ ಎಫೆಕ್ಟ ಆಗಿದ್ದು ಅರಿಸೀಕೆರೆ-ಬೆಂಗಳೂರು ನಡುವೆ ಅದಕ್ಕೆ ಬಿಯಾಂಡ್ ಇಲ್ಲ. ಆದುದರಿಂದ ಸ್ವಲ್ಪ ಒತ್ತಡ ಹೆಚ್ಚಾಗಿದೆ. . ತಮ್ಮ ಡಿಮಾಂಡ್ ಪ್ರಕಾರ ವಾಸ್ತವಿಕವಾಗಿದ್ದರೆ 3-4 ಬಸ್ಸುಗಳನ್ನು

ಹೆಚ್ಚುಮಾಡಬಹುದು. ಸೂಪರ್ ಡಿಲಕ್ಸ್ ಹಾಕಲು ಸಧ್ಯಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದೇನೆ. ಬಾಡಿ ಬಿಲ್ಡಿಂಗ್‌ಗೆ ಹೋಗಿರತಕ್ಕ ಬಸ್ಸುಗಳು ಬಂದನಂತರ ವ್ಯವಸ್ಥೆ ಮಾಡುತ್ತೇನೆ.

ಸ್ವಾತಂತ್ರ್ಯ ಯೋಧರಿಗೆ ಕೇಂದ್ರ ಸರ್ಕಾರದಿಂದ ಧನ ಸಹಾಯ.

297(1518) ಶ್ರಿ ಕೆ.ಹರ್ಷಕುಮಾರ್ ಗೌಡ (ಚಾಮರಾಜ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನ ಸ್ವಾತಂತ್ರ್ಯ ಯೋಧರಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವು ನೀಡುವ ಧನ ದೊರಕುತ್ತಿದೆ.

ಆ) ಪ್ರತಿಯೊಬ್ಬ ಸ್ವಾತಂತ್ರ್ಯ ಯೋಧರಿಗೆ ದೊರಕುವ ಸಹಾಯ ಧನವೆಷ್ಟು.

ಇ) ರಾಜ್ಯದಲ್ಲಿ ಈವರೆಗೆ ಯಾವುದೇ ಸಹಾಯವನ್ನು ಪಡೆಯದೆ ಧನ ಸಹಾಯಕ್ಕಾಗಿ ಅರ್ಜಿ ಸಲ್ಲಿಸಿದ್ದು ಕಾಯುತ್ತಿರುವ ಸ್ವಾತಂತ್ರ್ಯ ಯೋಧರೆಷ್ಟು.

ಈ)ಈ ಸ್ವಾತಂತ್ರ್ಯ ಯೋಧರುಗಳಿಗೆ ಉಚಿತ ಬಸ್‌ಪಾಸ್ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1. ಕೇಂದ್ರ ಪಿಂಚಣಿ ಪಡೆಯುತ್ತಿರುವವರು 5734

2. ರಾಜ್ಯ ಗೌರವಧನ ಪಡೆಯುತ್ತಿರುವವರು 15569

3. ಕೇಂದ್ರ ಹಾಗೂ ರಾಜ್ಯ ಗೌರವಧನ ಪಡೆಯುತ್ತಿರುವವರು 5547

4. ಗೋವಾ ಸ್ವಾತಂತ್ರ್ಯ ಯೋಧರ ಪಿಂಚಣಿ ಪಡೆಯುತ್ತಿರುವವರು 2349

ಒಟ್ಟು : 27199

ಆ) 1. ಕೇಂದ್ರ ಪಿಂಚಣಿದಾರರಿಗೆ ಮಾಹೆಯಾನ ರೂ. 1000-00

2. ರಾಜ್ಯ ಪಿಂಚಣಿದಾರರಿಗೆ ಮಾಹೆಯಾನ ರೂ. 500-00

3. ಗೋವಾ ಸ್ವಾತಂತ್ರ್ಯ ಯೋಧರಿಗೆ ಮಾಹೆಯಾನ ರೂ. 400-00

ಇ) 4796

ಈ) ರಾಜ್ಯದಲ್ಲಿರುವ ಸ್ವಾತಂತ್ರ್ಯ ಯೋಧರು ವರ್ಷಕೊಂದಾವರ್ತಿ ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ಮೂಲಕ ರಾಜ್ಯದ ಯಾವುದೇ ಎರಡು ಸ್ಥಳಗಳ ನಡುವೆ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯನ್ನು ಮಾರ್ಪಾಡು ಮಾಡುವ ಉದ್ದೇಶ ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ.

ಶ್ರಿ ಕೆ.ಹರ್ಷಕುಮಾರ್‌ಗೌಡ :- ಮಾನ್ಯ ಅಧ್ಯಕ್ಷರೆ ಸ್ವಾಂತ್ರ್ಯ ಯೋಧರಿಗೆ ಮಾಸಾಶನ